**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.1/2022

**PW**. 9

**CW**. 12

**ಸಾಕ್ಷಿಯ ಹೆಸರು – ಡಾಃ ಶ್ರೀನಾಥ ಬಿ.ಎಸ್.**

**ತಂದೆಯ ಹೆಸರು – ಸೀತಪ್ಪ ಬಿ.ಎನ್**

**ವಯಸ್ಸು – 55 ವರ್ಷಗಳು** ದಿನಾಂಕ 06.01.2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಸಹಾಯಕ ನೀರ್ದೇಶಕರು ಆರ್.ಎಫ್.ಎಸ್.ಎಲ್ ಬೆಳಗಾವಿ**

**ವಾಸಸ್ಥಳ – ಬೆಳಗಾವಿ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

**The evidence of witness i.e., CW**12 **is recorded through Video conference, In the presence of Public prosecutor, Accused, Advocate for accused**.

ದಿಃ06.03.2014 ರಿಂದ 2025 ರವರೆಗೆ ಎಫ್.ಎಸ್.ಎಲ್ ಬೆಂಗಳೂರಿನಲ್ಲಿ ಸ್ಫೋಟಕ ವಸ್ತುಗಳ ತಜ್ಞರಾಗಿ ದಿಃ11.09.2019 ರಂದು ಬಿಳಿಕೆರೆ ಪೋಲಿಸರು ಕಳುಹಿಸಿದ್ದ 3 ಸೀಲು ಮಾಡಿದ ವಸ್ತುಗಳನ್ನು ಪರೀಕ್ಷೆಗಾಗಿ ನಮ್ಮ ಇಲಾಖೆಯ ಸ್ವಾಗತ ವಿಭಾಗಕ್ಕೆ ಕಳುಹಿಸಿದ್ದು ಅಲ್ಲಿ ಅವುಗಳನ್ನು ನಾನು ಪಡೆದು ನೋಡಿದಾಗ ಸೀಲುಗಳು ಮಾದರಿ ಸೀಲುಗಳೊಂದಿಗೆ ತಾಳೆ ಮಾಡಿ ನೋಡಿದಾಗ ಸುಸ್ಥಿತಿಯಲ್ಲಿ ಇದ್ದವು. ಅವುಗಳಿಗೆ ತನಿಖಾಧೀಕಾರಿಗಳು ಕ್ರಮ ಸಂಖ್ಯೆ 1 ರಿಂದ 3 ಎಂದು ನಮೂದು ಮಾಡಿದರು.

ಸದರಿ 3 ವಸ್ತುಗಳನ್ನು ದಿನಾಂಕ 01.10.2020 ರಿಂದ 21.10.2020 ರವರೆಗೆ ಪರೀಕ್ಷೆ ಮಾಡಲಾಗಿದೆ. ಅವುಗಳನ್ನು ಪರೀಕ್ಷಿಸಿದ ಬಗ್ಗೆ ನನ್ನ ವರದಿಯಲ್ಲಿ ವಿವರಗಳನ್ನು ನಮೂದು ಮಾಡಲಾಗಿದೆ. ಸಂಖ್ಯೆ 1 ರ ವಸ್ತುವಿನಲ್ಲಿ ಅಮೋನಿಯಂ ನೈಟ್ರೇಟ್ ಸ್ಫೋಟಕ ವಸ್ತು ಇದ್ದು, 2 ನೇ ವಸ್ತುವಿನಲ್ಲಿ ಫ್ಯೂಜ್ ವೈರ್ ಗಳು ಇದ್ದವು. 3 ನೇ ವಸ್ತುವಿನಲ್ಲಿ Non Electrical detonators ಇದ್ದವು.

**SC No.1/2022**
**PW. 9**

ಸದರಿ 3 ವಸ್ತುಗಳು ಸ್ಫೋಟಕ ವಸ್ತುಗಳಾಗಿದ್ದು, ಅವು ಸ್ಫೋಟಿಸಿದರೆ ಮಾನವ ಜೀವ ಮತ್ತು ಆಸ್ತಿ ಪಾಸ್ತಿಗೆ ನಷ್ಟ ಉಂಟಾಗುತ್ತದೆ. ಆ ಬಗ್ಗೆ ವರದಿ ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ನಿಪಿ–8 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗರುತಿಸಲಾಯಿತು. ಪರೀಕ್ಷೆ ಮುಗಿದ ನಂತರ ಮೋಲೆ ಹೇಳಿದ ಮೂರು ವಸ್ತುಗಳನ್ನು ನಾಶಮಾಡಲಾಗಿದೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಕೆ.ಸಿ.ಬಿ. ವಕೀಲರಿಂದಃ–**

ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಯಾವುದೇ ಮೂರು ವಸ್ತುಗಳನ್ನು ಕಳುಹಿಸಿಕೊಟ್ಟಿಲ್ಲ ಮತ್ತು ಯಾವ ಪರೀಕ್ಷೆ ಮಾಡಿ ವರದಿ ನೀಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ನಿಪಿ–8 ನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.